# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬನಹಟ್ಟಿ

ಸಿ.ಸಿ. ನಂ. 523/2019

1) ಕರ್ನಾಟಕ ಸರಕಾರ ... ಫಿರ್ಯಾದಿದಾರ

ವಿರುದ್ಧ

1) ರಾಮಚಂದ್ರಪ್ಪಾ ಮುಡಿಯಪ್ಪಾ ಹುಳ್ಳಿಕೇರಿ
ವಯಾಃ 35 ವರ್ಷ, ಉಃ ಬಸ್ ಚಾಲಕ
ಸಾ:ಹನಮಾನೇರಿ ಇನಾಮ, ತಾಃ ಬಾದಾಮಿ ... ಆರೋಪಿ

## – ಆಪಾದನೆ –

ನಾನು ಶ್ರೀ. ಮಹೇಶ ಚಂದ್ರಕಾಂತ, ಬಿ.ಎ., ಎಲ್.ಎಲ್.ಎಂ. ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು, ಬನಹಟ್ಟಿ ತಾಃ ಜಮಖಂಡಿ ಹೊರೆಸುವ ಆಪಾದನೆ ಏನೆಂದರೆ,

ತೇರದಾಳ ಪೋಲಿಸ ಠಾಣೆಯ ಹದ್ದಿಯಲ್ಲಿ ಬರುವ ರಬಕವಿಯ ಮಹಾಲಿಂಗಪೂರ ನಾಕಾ ಹತ್ತಿರ ಆರೋಪಿಯಾದ ನೀವು ದಿಃ 08.11.2018 ರಂದು ಸಾಯಂಕಾಲ ನಡೆಸುತ್ತಿದ್ದ ಕೆಎಸ್ಆರ್.ಟಿ.ಸಿ ಬಸ್ ನಂಃ ಕೆಎ-29/ಎಫ್-1049 ನೇದ್ದನ್ನು ಅತೀ ಜೋರಾಗಿ ನಿರ್ಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿದ್ದು ಆ ಮೂಲಕ ಭಾ.ದಂ.ಸಂ. ಕಲಂ 279 ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀನು ಮೇಲೆ ಹೇಳಿದ ಬಸ್ಸನ್ನು ಮೇಲೆ ಹೇಳಿದ ಹಾಗೆ ಚಲಾಯಿಸಿಕೊಂಡು ಬಂದು ನಿನ್ನ ಸೈಡಿದು ಬರುತ್ತಿದ್ದ ಪಿರ್ಯಾದಿಯ ತಂದೆ ಬಾಷಾಸಾಬ ಹಸನಸಾಬ ಮುಜಾವರ ಇವನು ನಡೆಸುತ್ತಿದ್ದ ಮೋಟಾರ ಸೈಕಲ್ ನಂಃ ಕೆಎ-48/ಯು-6501 ನೇದ್ದಕ್ಕೆ ಹಾಯಿಸಿ ಅಪಘಾತಪಡಿಸಿ ಪಿರ್ಯಾದಿಯ ತಂದೆಯ ಬಲಗಣ್ಣಿಗೆ ಮತ್ತು ಕಪಾಳಕ್ಕೆ ಸಾದಾ ಗಾಯಪಡಿಸಿದ್ದು ಅಲ್ಲದೇ ಎಡಗಾಲಿಗೆ ಒಳಪೆಟ್ಟು ಪಡಿಸಿದ್ದು ಆ ಮೂಲಕ ಭಾ.ದಂ.ಸಂ. ಕಲಂ 337 ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ.

R. M. Hulikeri

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀನು ಸದರಿ ಅಪಘಾತದ ಸಂಗತಿಯನ್ನು ಪೋಲಿಸ ಠಾಣೆಗೆ ತಿಳಿಸದೇ ಹೋಗಿದ್ದು ಆ ಮೂಲಕ ಮೋಟಾರ ವಾಹನ ಕಾಯ್ದೆ ಕಲಂ 187 ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಈ ಎಲ್ಲಾ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ (ಅಧಿಕಾರ ವ್ಯಾಪ್ತಿಯಲ್ಲಿ) ಮಾಡಿರುತ್ತೀರಿ. ಈ ಮೇಲ್ಕಂಡ ದೋಷಾರೋಪಣೆಗಳಿಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ?
ಉತ್ತರಃ- —ಹೌದು—

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೊ?
ಉತ್ತರಃ- — ತಪ್ಪು ಮಾಡಿಲ್ಲ, ವಿಚಾರಣೆ ಬಯಸುತ್ತೇನೆ.

ಮೇಲೆ ಹೇಳಲಾದ ಆರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ದಿಃ18.02.2021 ರಂದು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

ಸ್ಥಳಃ ಬನಹಟ್ಟಿ
ದಿನಾಂಕಃ 18.02.2021

18/2/21
ಪ್ರ. ದ. ನ್ಯಾ., ದಂಡಾಧಿಕಾರಿಗಳು,
ಬನಹಟ್ಟಿ.

R.M Hulibeni